ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	387
ಮಾನ್ಯ ಸದಸ್ಯರ ಹೆಸರು	ಶ್ರೀ ಪಿ.ಆರ್. ರಮೇಶ್.(ನಾಮನಿರ್ದೇಶನ ಹೊಂದಿದವರು)
ಉತ್ತರಿಸಬೇಕಾದ ದಿನಾಂಕ	18.02.2022
ಉತ್ತರಿಸುವ ಸಚಿವರು	ಮಾನ್ಯ ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು.

ಕ್ರ. ಸಂ.	ಪ್ರಶ್ನೆ	ಉತ್ತರ
ಅ)	ಕರ್ನಾಟಕದಲ್ಲಿ ಅಲೆಮಾರಿ ಬುಡಕಟ್ಟು ಜನಾಂಗದಲ್ಲಿ ಎಷ್ಟು ಜಾತಿ/ಪಂಗಡಗಳಿವೆ; ಮತ್ತು ಜನಸಂಖ್ಯೆವಾರು ವಿವರಗಳನ್ನು ಹಿಂದುಳಿದ ಜಾತಿ, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳಡಿಯಲ್ಲಿ ವರ್ಗೀಕರಿಸಿ ಮಾಹಿತಿ ನೀಡುವುದು;	**ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ** ಸರ್ಕಾರದ ಆದೇಶ ಸಂಖ್ಯೆ: ಪಿಹೆಚ್‌ಎಸ್ 262 ಎಸ್‌ಇಡಬ್ಲ್ಯೂ 65, ದಿನಾಂಕ: 01.02.1996ರ ಪ್ರಕಾರ ಹಿಂದುಳಿದ ವರ್ಗಗಳ 46 ಜಾತಿಗಳು ಅಲೆಮಾರಿ / ಅರೆಅಲೆಮಾರಿ ಜನಾಂಗಕ್ಕೆ ಸೇರಿವೆ. (ವಿವರಗಳನ್ನು ಅನುಬಂಧ-1ರಲ್ಲಿ ನೀಡಲಾಗಿದೆ). ಸದರಿ ಸಮುದಾಯಗಳ ಅಂದಾಜು ಜನಸಂಖ್ಯಾ ವಿವರ ಲಭ್ಯವಿದ್ದು, ನಿಖರವಾದ ಜನಸಂಖ್ಯಾ ಮಾಹಿತಿ ಲಭ್ಯವಿರುವುದಿಲ್ಲ. ಅಂದಾಜು ಜನಸಂಖ್ಯಾ ವಿವರವನ್ನು ಅನುಬಂಧ-2ರಲ್ಲಿ ನೀಡಲಾಗಿದೆ. **ಸಮಾಜ ಕಲ್ಯಾಣ ಇಲಾಖೆ** ಸರ್ಕಾರದ ಆದೇಶ ಸಂಖ್ಯೆ: ಸಕಇ 10 ಎಸ್.ಎಲ್.ಪಿ. 2015 ಬೆಂಗಳೂರು ದಿನಾಂಕ: 12.01.2016 ಹಾಗೂ ಸರ್ಕಾರದ ಆದೇಶ ಸಂಖ್ಯೆ:179 ಎಸ್‌ಡಿಸಿ 2016 ದಿನಾಂಕ: 19.09.2016ರಂತೆ ಆದೇಶದನ್ವಯ ಪರಿಶಿಷ್ಟ ಪಂಗಡದ ಅಲೆಮಾರಿ ಸಮುದಾಯಗಳು ಹಾಗೂ ಅರಣ್ಯ ಆಧಾರಿತ ಆದಿವಾಸಿ ಸಮುದಾಯಗಳ ಒಟ್ಟು 30 ಜಾತಿಗಳ ವಿವರ ಅನುಬಂಧ-3ರಲ್ಲಿ ನೀಡಲಾಗಿದೆ.
ಆ)	ರಾಜ್ಯದಲ್ಲಿರುವ ಅಲೆಮಾರಿ ಬುಡಕಟ್ಟು ಜನಾಂಗದ ಅಭಿವೃದ್ಧಿಗೆ ಸರ್ಕಾರದಿಂದ ಜಾರಿಗೆ ತಂದಿರುವ ಕಾರ್ಯಕ್ರಮಗಳು /ಯೋಜನೆಗಳು ಯಾವುವು; (ವಿವರ ನೀಡುವುದು)	**ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ** ರಾಜ್ಯದಲ್ಲಿರುವ ಅಲೆಮಾರಿ / ಅರೆಅಲೆಮಾರಿ ಜನಾಂಗದ ಅಭಿವೃದ್ಧಿಗೆ ಸರ್ಕಾರದಿಂದ ಜಾರಿಗೆ ತಂದಿರುವ ಕಾರ್ಯಕ್ರಮಗಳು/ ಯೋಜನೆಗಳ ವಿವರವನ್ನು ಅನುಬಂಧ-4 ರಲ್ಲಿ ನೀಡಲಾಗಿದೆ. ಅಲೆಮಾರಿ/ಅರೆ ಅಲೆಮಾರಿ ಅಭಿವೃದ್ಧಿ ನಿಗಮದ ಮೂಲಕ ಈ ಕೆಳಕಂಡ ಯೋಜನೆಗಳನ್ನು ಅನುಷ್ಠಾನಗೊಳಿಸಲಾಗುತ್ತಿದೆ. 1. ಸ್ವಯಂ ಉದ್ಯೋಗ ಸಾಲ ಯೋಜನೆ. 2. ಸ್ವ-ಸಹಾಯ ಗುಂಪುಗಳ ಸಾಲ ಮತ್ತು ಉದ್ಯೋಗ ಸಾಲ ಯೋಜನೆ. 3. ಬ್ಯಾಂಕ್ ಸಹಯೋಗದೊಂದಿಗೆ ಸ್ವಯಂ ಉದ್ಯೋಗ ಸಾಲ ಯೋಜನೆ. 4. ಅರಿವು ಶೈಕ್ಷಣಿಕ ಸಾಲ ಯೋಜನೆ. 5. ಗಂಗಾ ಕಲ್ಯಾಣ ನೀರಾವತಿ ಯೋಜನೆ. 6. ಕೌಶಲ್ಯಾಭಿವೃದ್ಧಿ ತರಬೇತಿ ಯೋಜನೆ..

		ಸಮಾಜ ಕಲ್ಯಾಣ ಇಲಾಖೆ ರಾಜ್ಯದಲ್ಲಿರುವ ಅಲೆಮಾರಿ ಆದಿವಾಸಿ ಬುಡಕಟ್ಟು ಸಮುದಾಯಗಳ ಸಮಗ್ರ ಅಭಿವೃದ್ಧಿಗಾಗಿ 2019-20ನೇಸಾಲಿನಿಂದ ಕರ್ನಾಟಕ ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮದ ವತಿಯಿಂದ ಈ ಕೆಳಕಂಡ ಯೋಜನೆಗಳನ್ನು ಅನುಷ್ಠಾನಗೊಳಿಸಲಾಗುತ್ತಿದೆ. 1.ಸ್ವಯಂ ಉದ್ಯೋಗ ನೇರಸಾಲ ಯೋಜನೆ:-(ಘಟಕ ವೆಚ್ಚ ರೂ.50,000). ಪ್ರತಿ ಫಲಾಪೇಕ್ಷಿಗೆ ರೂ.25,000/-ಗಳ ಸಹಾಯಧನ ಮತ್ತು ರೂ.25,000/-ಗಳ ಸಾಲ. 2.ಪ್ರೇರಣಾ ಮೈಕ್ರೋ ಕ್ರೆಡಿಟ್ (ಕಿರುಸಾಲ) ಯೋಜನೆ:- ಸ್ವ-ಸಹಾಯ ಸಂಘದಲ್ಲಿ ಸದಸ್ಯರಾಗಿರುವ ಪರಿಶಿಷ್ಟ ಪಂಗಡದ ಪ್ರತಿ ಫಲಾಪೇಕ್ಷಿಗೆ ರೂ. 0.15 ಲಕ್ಷ ಸಹಾಯಧನ ಮತ್ತು ರೂ. 0.10 ಲಕ್ಷ ಸಾಲ. 3.ಉದ್ಯಮಶೀಲತಾ ಯೋಜನೆ:- ಘಟಕ ವೆಚ್ಚದ ಸಹಾಯ ಧನವನ್ನು ರೂ. 2.00 ಲಕ್ಷಕ್ಕೆ ಮಿತಿಗೊಳಿಸಿ, ಬ್ಯಾಂಕ್ ಸಾಲದೊಂದಿಗೆ ಯೋಜನೆಯನ್ನು ಅನುಷ್ಠಾನಗೊಳಿಸುವುದು. 4.ಉದ್ಯಮಶೀಲತಾ ಯೋಜನೆ ಸರಕು ವಾಹನ :- ಸರಕು ವಾಹನಗಳಿಗೆ ಗರಿಷ್ಠ ರೂ.3.50 ಲಕ್ಷ ಸಹಾಯಧನವನ್ನು ಮಿತಿಗೊಳಿಸಿ, ಬ್ಯಾಂಕ್ ಸಾಲದೊಂದಿಗೆ ಯೋಜನೆಯನ್ನು ಅನುಷ್ಠಾನಗೊಳಿಸುವುದು. ವಸತಿ (ಮನೆ) ನಿರ್ಮಾಣ ಯೋಜನೆ. ಪರಿಶಿಷ್ಟ ಪಂಗಡದ ಅಲೆಮಾರಿ ಸಮುದಾಯದವರಿಗೆ ನಿವೇಶನವಿರುವ ವಸತಿ ರಹಿತ, ನಿವೇಶನ (ಸೈಟ್) ಹೊಂದಿದ ಫಲಾಪೇಕ್ಷಿಗಳಿಗೆ ಯೋಜನೆಯನ್ನು ಅನುಷ್ಠಾನಗೊಳಿಸಲಾಗುವುದು.
ಇ)	ಸದರಿ ಅಲೆಮಾರಿ ಬುಡಕಟ್ಟು ಜನಾಂಗದವರು ರಾಜ್ಯದಲ್ಲಿ ಸಂಚರಿಸಲು ಅಲೆಮಾರಿ ಕಾರಿಡಾರ್ ಗಳನ್ನು ಸೃಷ್ಟಿಸಲಾಗಿದೆಯೇ ಮತ್ತು ಸದರಿ ತಂಗುದಾಣಗಳನ್ನು ಕಲ್ಪಿಸಲಾಗಿದೆಯೇ; (ವಿವರಗಳನ್ನು ನೀಡುವುದು).	ಇಲ್ಲ.
ಈ)	ಅಲೆಮಾರಿ ಬುಡಕಟ್ಟು ಜನಾಂಗದವರಿಗೆ ಸರ್ಕಾರಿ ಯೋಜನೆಗಳು / ಕಾರ್ಯಕ್ರಮಗಳು /ಸೌಲಭ್ಯಗಳ ಕುರಿತು ಮಾಹಿತಿ ನೀಡಲು ಸರ್ಕಾರದಿಂದ ಮಾಹಿತಿ ಕೇಂದ್ರಗಳನ್ನು ಬೆಂಗಳೂರು ಸೇರಿದಂತೆ ಎಲ್ಲಾ ಜಿಲ್ಲೆಗಳಲ್ಲಿ ಸ್ಥಾಪಿಸಲಾಗಿದೆಯೇ? (ವಿವರಗಳನ್ನು ನೀಡುವುದು)	**ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ** ಅಲೆಮಾರಿ ಅರೆ/ಅಲೆಮಾರಿ ಅಭಿವೃದ್ಧಿ ನಿಗಮವನ್ನು ಸ್ಥಾಪಿಸಲಾಗಿದೆ. ಸದರಿ ನಿಗಮದ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಎಲ್ಲಾ ಜಿಲ್ಲೆ/ತಾಲ್ಲೂಕು ಕೇಂದ್ರಗಳಲ್ಲಿ ನಿರ್ವಹಿಸುತ್ತಿರುವ ಇಲಾಖಾ ಕಛೇರಿಗಳಲ್ಲಿ ಅಲೆಮಾರಿ/ ಅರೆ ಅಲೆಮಾರಿ ಸಮುದಾಯದವರಿಗೆ ಲಭ್ಯವಿರುವ ಯೋಜನೆಗಳ ಮಾಹಿತಿಯನ್ನು ಇಲಾಖೆಯ ಜಾಲತಾಣದಲ್ಲಿ https://bcwd.karnataka.gov.in/ ಹಾಗೂ kaad.karnataka.gov.in ರಲ್ಲಿ ನೀಡಲಾಗಿದೆ. ಮುಂದುವರೆದು, ಈ ಸಮುದಾಯದವರು ಹೆಚ್ಚಿನ ಸಂಖ್ಯೆಯಲ್ಲಿ ವಾಸಿಸುತ್ತಿರುವ ಗ್ರಾಮಗಳು/ಕಾಲೋನಿಗಳಲ್ಲಿ ಇಲಾಖೆಯಿಂದ ಅರಿವು ಮೂಡಿಸುವ ಕಾರ್ಯಕ್ರಮಗಳನ್ನು ಆಯೋಜಿಸಲಾಗುತ್ತಿದೆ.

		ಅಲೆಮಾರಿ ಜನಾಂಗದವರಿಗೆ ಸರ್ಕಾರಿ ಯೋಜನೆಗಳು /ಕಾರ್ಯಕ್ರಮಗಳು/ ಸೌಲಭ್ಯಗಳ ಕುರಿತು ಮಾಹಿತಿ ನೀಡಲು 2021-22ನೇ ಸಾಲಿನಲ್ಲಿ ಆಯೋಜಿಸಲಾಗಿರುವ ಅರಿವು ಮೂಡಿಸುವ ಕಾರ್ಯಕ್ರಮಗಳ ವಿವರಗಳನ್ನು ಅನುಬಂಧ-5 ರಲ್ಲಿ ನೀಡಲಾಗಿದೆ. **ಸಮಾಜ ಕಲ್ಯಾಣ ಇಲಾಖೆ** ರಾಜ್ಯದಲ್ಲಿರುವ ಅಲೆಮಾರಿ ಹಾಗೂ ಆದಿವಾಸಿ ಬುಡಕಟ್ಟು ಜನಾಂಗದವರಿಗೆ ನಿಗಮದ ಯೋಜನೆಗಳು / ಕಾರ್ಯಕ್ರಮಗಳು/ ಸೌಲಭ್ಯಗಳನ್ನು ಪಡೆಯಲು ಮಾಹಿತಿ ಕುರಿತಂತೆ ಕೇಂದ್ರ ಕಛೇರಿ ಕರ್ನಾಟಕ ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮ ಬೆಂಗಳೂರು, ಹಾಗೂ ನಿಗಮದ 30 ಜಿಲ್ಲೆಗಳಲ್ಲಿ ಮತ್ತು ನಿಗಮದ ವೆಬ್‌ಸೈಟ್(Kmvstdcl) ನಲ್ಲಿ ಮಾಹಿತಿ ನೀಡಲಾಗುತ್ತಿದೆ.

ಸಂಖ್ಯೆ:ಹಿಂವಕ 93 ಬಿಂಎಂಎಸ್ 2022

(ಕೋಟ ಶ್ರೀನಿವಾಸ ಪೂಜಾರಿ)
ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ

ಮಾನ್ಯ ವಿಧಾನಪರಿಷತ್ ಸದಸ್ಯರಾದ ಶ್ರೀ ಪಿ.ಆರ್.ರಮೇಶ್ (ನಾಮನಿರ್ದೇಶನ ಹೊಂದಿದವರು) ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 387 ರ (ಅ) ಗೆ

ಅನುಬಂಧ-1

ಸರ್ಕಾರದ ಆದೇಶ ಸಂಖ್ಯೆ:ಪಿ.ಹೆಚ್.ಎಸ್. 262 ಎಸ್.ಇ.ಡಬ್ಲ್ಯೂ. 65 ದಿನಾಂಕ: 01-02-1966 ರ ಪ್ರಕಾರ ಈ ಕೆಳಗಿನ ಜಾತಿಗಳು ಅಲೆಮಾರಿ / ಅರೆಅಲೆಮಾರಿ ಜನಾಂಗಕ್ಕೆ ಸೇರಿವೆ.

1	ಬೈರಾಗಿ (ಬಾವ)	Bairagi (Bava)
2	ಬಾಲಸಂತೋಷಿ - ಜೋಷಿ	Balasanthoshi- Joshi
3	ಬಾಜಿಗರ್	Bazigar
4	ಭರಡಿ	Bharadi
5	ಬುಡ್ ಬುಡಕಿ-ಜೋಷಿ-ಗೊಂಧಳಿ	Budbudki-Joshi-Gondahali
6	ಚಾರ	Chara
7	ಚಿತ್ರಕಥಿ-ಜೋಷಿ	Chitrakathi-Joshi
8	ಧೋಲಿ	Dholi
9	ಡವೇರಿ	Daveri
10	ದೊಂಬರಿ	Dombari
11	ಘಿಸಾಡಿ	Ghisadi
12	ಗಾರುಡಿ	Garudi
13	ಗೋಪಾಲ್	Gopal
14	ಗೊಂದಳಿ	Gondali
15	ಹೆಳವ	Helava
16	ಜೋಗಿ	Jogi
17	ಕೇಲ್ಕರಿ	Kelkari
18	ಕೋಲ್ಹಟಿ	Kolhati
19	ನಂದಿವಾಲ-ಜೋಷಿ-ಗೊಂದಳಿ, ಫುಲ್ ಮಾಲಿ	Nandiwala-Joshi-Ghondali-Full –Mali
20	ನಾಥಪಂಥಿ, ಡೌರಿಗೋಸಾವಿ	Nathpanthi, Dauri Gosavi
21	ನಿರ್ಶಿಕಾರಿ	Nirshikari
22	ಪಾಂಗ್ಯುಯಲ್	Panguaul
23	ಜೋಷಿ (ಸಾದ ಜೋಷಿ)	Joshi (Sada Joshi)
24	ಸಾನ್ಸಿಯ	Sansia
25	ಸರಾನಿಯ	Sarania
26	ತಿರುಮಲಿ	Tirumali
27	ವಾಯ್ಡು	Vaidu
28	ವಾಸುದೇವ್	Vasudev
29	ವಾಡಿ	Vadi

30	ವಾಗ್ರಿ	Vagri
31	ವಿರ್	Vir
32	ಬಜನಿಯ	Bajania
33	ಶಿಕ್ಕಲಿಗರ್	Shikkaligar
34	ಗೊಲ್ಲ	Golla
37	ದುರ್ಗ-ಮುರ್ಗ (ಬುರ್ ಬುರ್ ಚ)	Durgamurga (Burburcha)
38	ಹಾವ್ ಗಾರ್ (ಹಾವಾಡಿಗಾರ್)	Howgar (Howadigar)
39	ಪಿಚಗುಂಟಲ	Pichaguntala
40	ಮಸಣಿಯ ಯೋಗಿ	Masania Yogi
41	(ಬೆಸ್ತರ್) ಬುಂಡಬೆಸ್ತ	(Bestar) Bunda Besta
42	ಕಟಬು	Katabu
43	ದರ್ವೇಶ್	Darwesh
44	ಕಾಶಿ ಕಪಾಡಿ	Kashikapdi
45	ದೊಂಬಿದಾಸ	Dombidasa
46	ಬೈಲಪತರ್	Bailapatar

ಆಯುಕ್ತರು
ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ,
ಬೆಂಗಳೂರು.

[illegible] (ಸಾರ್ವಜನಿಕ [illegible]) [illegible], [illegible] ಸಂಖ್ಯೆ: 387 ರ (ಅ) ಗೆ

ಅನುಬಂಧ 2

[illegible] ಅಂದಾಜು ಜನಸಂಖ್ಯೆ ವಿವರ

ಕ್ರ ಸಂ.	ಜಿಲ್ಲೆಗಳ ಹೆಸರು	ಅಂದಾಜು ಜನ ಸಂಖ್ಯೆ
1	ಬೆಂಗಳೂರು ನಗರ	3461
2	ಬೆಂಗಳೂರು ಗ್ರಾಮಾಂತರ	22749
3	ಬೆಳಗಾವಿ	19745
4	ಬಳ್ಳಾರಿ	55683
5	ಬೀದರ್	23282
6	ಬಾಗಲಕೋಟೆ	7769
7	ಚಿಕ್ಕಮಗಳೂರು	9522
8	ಚಿತ್ರದುರ್ಗ	175543
9	ಚಾಮರಾಜನಗರ	5628
10	ಚಿಕ್ಕಬಳ್ಳಾಪುರ	38574
11	ಧಾರವಾಡ	17026
12	ದಕ್ಷಿಣ ಕನ್ನಡ	1186
13	ದಾವಣಗೆರೆ	32035
14	ಗದಗ	8678
15	ಹಾಸನ	22851
16	ಹಾವೇರಿ	13884
17	ಕಲ್ಬುರ್ಗಿ	14137
18	ಕೋಲಾರ	20175
19	ಕೊಡಗು	974
20	ಕೊಪ್ಪಳ	14635
21	ಮೈಸೂರು	9645
22	ಮಂಡ್ಯ	2984
23	ರಾಯಚೂರು	22869

ಕ್ರ.ಸಂ.	ಜಿಲ್ಲೆಯ ಹೆಸರು	[illegible]
24	[illegible]	11620
25	[illegible]	14655
26	[illegible]	140045
27	ಉತ್ತರ ಕನ್ನಡ	2170
28	ಉಡುಪಿ	2641
29	ವಿಜಯಪುರ	16700
30	ಯಾದಗಿರಿ	23123

ಆಯುಕ್ತರು

[illegible]

ಬೆಂಗಳೂರು

ಅನುಬಂಧ-3

2011ರ ಜನಗಣತಿಯಂತೆ ಪರಿಶಿಷ್ಟಪಂಗಡದ ಅಲೆಮಾರಿ, ಅರೆಅಲೆಮಾರಿ,ಸೂಕ್ಷ ಮತ್ತು ಅತಿಸೂಕ್ಷ್ಮ ಸಮುದಾಯದ ಜನಸಂಖ್ಯೆಯ ವಿವರ.

(ಸರ್ಕಾರದ ಆದೇಶ ಸಂಖ್ಯೆ: ಸಕಇ ಎಸ್‌ಲ್‌ಪಿ 2015 ಬೆಂಗಳೂರು.ದಿನಾಂಕ:12.01.2016.ರ ಪ್ರಕಾರ)

ಕ್ರಸಂ.	ಪರಿಶಿಷ್ಟ ಪಂಗಡದ ಅಲೆಮಾರಿ, ಅರೆಅಲೆಮಾರಿ, ಸೂಕ್ಷ್ಮ ಮತ್ತು ಅತಿಸೂಕ್ಷ್ಮ ಸಮುದಾಯಗಳು	ಒಟ್ಟು ಜನಸಂಖ್ಯೆ
01	ಚೆಂಚು ಚೆಂಚುವಾರ್	954
02	ಗೌಡಲು	8617
03	ಹಕ್ಕಿ ಪಿಕ್ಕಿ	11892
04	ಪಾರ್ಧಿ, ಅಡವಿನ್‌ಚಿಂಚಲ್, ಪಾನ್ಸಿಪಾರ್ಧಿ ಹರಣಶಿಕಾರಿ,	10746
05	ಹಸಲರು	24466
06	ಇರುಳಿಗ	11892
07	ಕತೋಡಿ, ಕಟ್ಕರಿ, ಧೋರ್‌ಕತೋಡಿ, ಧೋರ್ ಕಟ್ಕರಿ, ಸನ್ ಕಟ್ಕರಿ,	280
08	ಕುಡಿಯ, ಮಲೆಕುಡಿ,	2169
09	ಪಣಿಯನ್	495
10	ರಾಜಗೊಂಡ, ಗೊಂಡ, ನಾಯಕ್‌ಪಾಡ್,	158243
11	ದುಬಲ, ತಾಳವ್ಯ ಹಳಪಟ್ಟಿ,	264
12	ಗಮಟ, ಗಮಟಿ, ಮಾನಚೈ, ಪಡವಿ, ವಲವೈ,	516
13	ಇರುಳರ್	703
14	ಕಮ್ಮಾರ,(ದಕ್ಷಿಣ ಕನ್ನಡಜಿಲ್ಲೆ ಚಾಮರಾಜನಗರಜಿಲ್ಲೆ ಕೊಳ್ಳೆಗಾಲ ತಾಲ್ಲೂಕು)	949
15	ಕೊಂಡಕಾಪಾಸ್	7438
16	ಕೊಯ, ಬಿನೆ ಕೋಯ	365
17	ಕುರುಬ ಕೊಡಗು ಜಿಲ್ಲೆ	3111
18	ಮೇದ, ಮೇದರಿ, ಗೌರಿಗ, ಬುರುಗ,	44160
19	ಯರವ	30359
20	ಬೌಚ, ಬಂಚ.	960
21	ಬಿಲ್,ಬಿಲ್‌ಗರಾಸಿಯ,ದೋಲಿಬಿಲ್,ಡುಂಗ್ರಿಬಿಲ್, ಡುಂಗ್ರಿಗರಾಸಿಯ, ರಾವಲ್‌ಬಿಲ್, ತಡವಿಬಿಲ್, ಭಾಗಲಿಯ, ಬಿಲಾಲ, ಪರ್ವ ವಸವ, ವಸವೆ,	6204
22	ಅಡಿಯನ್	758
23	ಬರಡ	266
	ಒಟ್ಟು.	**325807**

2011ರ ಜನಗಣತಿಯಂತೆ ಆದಿವಾಸಿ ಬುಡಕಟ್ಟು ಸಮುದಾಯದ ಜನಸಂಖ್ಯೆಯ ವಿವರ.

(ಸರ್ಕಾರದ ಆದೇಶ ಸಂಖ್ಯೆ: ಸಕಇ 179ಎಸ್‌ಡಿಸಿ 2016 ಬೆಂಗಳೂರು.ದಿನಾಂಕ:19.09.2016.ರ ಪ್ರಕಾರ)

ಕ್ರ.ಸಂ.	2011ರ ಜನಗಣತಿಯಂತೆ ಆದಿವಾಸಿ ಬುಡಕಟ್ಟು ಸಮುದಾಯ ಜನಸಂಖ್ಯೆ ವಿವರ	ಒಟ್ಟು ಜನಸಂಖ್ಯೆ
01	ಜೇನುಕುರುಬ	136076
02	ಕೊರಗ	14794
03	ಸೋಲಿಗ, ಸೋಲಿಗರು	33819
04	ಮಲೇರು	440
05	ಸಿದ್ದಿ(ಉತ್ತರ ಕನ್ನಡ ಜಿಲ್ಲೆ)	10477
06	ಕಾಡು ಕುರುಬ	11953
07	ತೋಡ	147
	ಒಟ್ಟು	107706

ಮಾನ್ಯ ವಿಧಾನಪರಿಷತ್ ಸದಸ್ಯರಾದ ಶ್ರೀ ಪಿ.ಆರ್.ರಮೇಶ್ (ನಾಮನಿರ್ದೇಶನ ಹೊಂದಿದವರು) ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 387 ರ (ಅ) ಗೆ ಅನುಬಂಧ-4

ಅಲೆಮಾರಿ/ಅರೆಅಲೆಮಾರಿ ಜನಾಂಗದವರ ಅಭಿವೃದ್ಧಿ ಕಾರ್ಯಕ್ರಮಗಳ ವಿವರ

1. ಮೆಟ್ರಿಕ್-ಪೂರ್ವ ವಿದ್ಯಾರ್ಥಿಗಳಿಗೆ ವಿಶೇಷ ಪ್ರೋತ್ಸಾಹಧನ:

ಅಲೆಮಾರಿ ಹಾಗೂ ಅರೆಅಲೆಮಾರಿ ಪಂಗಡಕ್ಕೆ ಸೇರಿದ ವಿದ್ಯಾರ್ಥಿಗಳ ಪ್ರಾಥಮಿಕ, ಮಾಧ್ಯಮಿಕ ಹಾಗೂ ಪ್ರೌಢಶಿಕ್ಷಣಕ್ಕೆ ಆರ್ಥಿಕ ನೆರವು ನೀಡುವುದರ ಮೂಲಕ ಅವರಲ್ಲಿ ಮಧ್ಯದಲ್ಲಿ ಶಾಲೆ ಬಿಡುವವರ ಪ್ರಮಾಣವನ್ನು ಕಡಿಮೆ ಮಾಡಲು ಹಾಗೂ ಈ ಹಂತದ ಶಿಕ್ಷಣ ಮುಂದುವರಿಕೆಯ ಉದ್ದೇಶದಿಂದ, ಸರ್ಕಾರಿ ಅಥವಾ ಸರ್ಕಾರದಿಂದ ಮಾನ್ಯತೆ ಪಡೆದ ಖಾಸಗಿ ಶಿಕ್ಷಣ ಸಂಸ್ಥೆಯಲ್ಲಿ ವ್ಯಾಸಂಗ ಮಾಡುವ ವಿದ್ಯಾರ್ಥಿಗಳಿಗೆ ಈ ಕೆಳಕಾಣಿಸಿದ ದರಗಳಲ್ಲಿ ಪ್ರೋತ್ಸಾಹಧನ ಮಂಜೂರು ಮಾಡಲು ಈ ಕಾರ್ಯಕ್ರಮವನ್ನು ರೂಪಿಸಿ ಜಾರಿಗೆ ತರಲಾಗುತ್ತಿದೆ.

ಕ್ರ. ಸಂ.	ತರಗತಿ	ಮಾಹೆಯಾನ ಪ್ರೋತ್ಸಾಹಧನ ದರಗಳು		ಅವಧಿ	ಒಟ್ಟು ಮೊತ್ತ (ರೂ.ಗಳಲ್ಲಿ)
		ಬಾಲಕ	ಬಾಲಕಿಯರು		
1	1 ರಿಂದ 10ನೇ ತರಗತಿ	ರೂ.200/-	ರೂ.200/-	10 ತಿಂಗಳು	2000/-

2. ಮೆಟ್ರಿಕ್ ನಂತರ ವಿದ್ಯಾರ್ಥಿಗಳಿಗೆ ಅರ್ಹತಾ ವಿದ್ಯಾರ್ಥಿ ವೇತನ:

ಅಲೆಮಾರಿ/ಅರೆ ಅಲೆಮಾರಿ ಪಂಗಡಕ್ಕೆ ಸೇರಿದ ವಿದ್ಯಾರ್ಥಿಗಳ ಮೆಟ್ರಿಕ್ ನಂತರದ ಶಿಕ್ಷಣವನ್ನು ಮುಂದುವರೆಸಲು ಹಾಗೂ ಈ ಹಂತದ ವಿದ್ಯಾರ್ಥಿಗಳಿಗೆ ಶಿಕ್ಷಣದಲ್ಲಿ ಉತ್ತೇಜನ ನೀಡುವ ಉದ್ದೇಶದಿಂದ ಸರ್ಕಾರಿ ಅಥವಾ ಸರ್ಕಾರದಿಂದ ಮಾನ್ಯತ ಪಡೆದ ಖಾಸಗಿ ಶಿಕ್ಷಣ ಸಂಸ್ಥೆಯಲ್ಲಿ ವಿಶ್ವ ವಿದ್ಯಾಲಯದಿಂದ ಅಂಗೀಕೃತವಾದ ಕೋರ್ಸಿನಲ್ಲಿ ವ್ಯಾಸಂಗ ಮಾಡುವ ವಿದ್ಯಾರ್ಥಿಗಳಿಗೆ ಅವರು ಹಿಂದಿನ ತರಗತಿಯ ವಾರ್ಷಿಕ ಪರೀಕ್ಷೆಯಲ್ಲಿ ಗಳಿಸಿರುವ ಅಂಕಗಳ ಅರ್ಹತೆಯ ಆಧಾರದ ಮೇಲೆ ಈ ಕೆಳಕಾಣಿಸಿದ ದರಗಳಲ್ಲಿ ಅರ್ಹತಾ ವಿದ್ಯಾರ್ಥಿವೇತನ ಮಂಜೂರು ಮಾಡಲಾಗುವುದು.

ಕ್ರ. ಸಂ.	ವಿವರ	ಮಾಸಿಕ ವಿದ್ಯಾರ್ಥಿವೇತನದ ದರ	ಅವಧಿ	ಒಟ್ಟು ಮೊತ್ತ (ರೂ.ಗಳಲ್ಲಿ)
1	ಪಿ.ಯು.ಸಿ. ಮತ್ತು ಡಿಪ್ಲೊಮಾ	ರೂ.300/-	10 ತಿಂಗಳಿಗೆ	3000/-
2	ಪದವಿ ಮತ್ತು ಸ್ನಾತಕೋತ್ತರ ಪದವಿ	ರೂ.400/-	10 ತಿಂಗಳಿಗೆ	4000/-
3	ಸಿಇಟಿ ಮೂಲಕ ಸರ್ಕಾರಿ ಕೋಟಾದಲ್ಲಿ ಬಿ.ಇ, ಎಂ.ಬಿ.ಬಿ.ಎಸ್., ಬಿ.ಡಿ.ಎಸ್., ತತ್ಸಮಾನವಾದ ಇನ್ನಿತರ ತಾಂತ್ರಿಕ/ ವೃತ್ತಿಪರ ಕೋರ್ಸುಗಳಿಗೆ	ರೂ.500/-	10 ತಿಂಗಳಿಗೆ	5000/-

[illegible] ಆಶ್ರಮ ಶಾಲೆಗಳ ಸ್ಥಾಪನೆ ಹಾಗೂ ನಿರ್ವಹಣೆ:

[illegible] ಅಲೆಮಾರಿ ಹಾಗೂ ಅರೆಅಲೆಮಾರಿ ಜನಾಂಗದವರ ಕುಟುಂಬಕ್ಕೆ ಸೇರಿದ ಮಕ್ಕಳ ಪ್ರಾಥಮಿಕ ಶಿಕ್ಷಣಕ್ಕೆ [illegible] ಹಾಗೂ ಉತ್ತೇಜನ ನೀಡುವ ದೃಷ್ಟಿಯಿಂದ 125 ಸಂಖ್ಯಾಬಲದ 4 ಆಶ್ರಮ ಶಾಲೆಗಳನ್ನು, ಕೊಪ್ಪಳ, [illegible] ಚಿಕ್ಕಮಗಳೂರು ಮತ್ತು ಬೆಳಗಾಂ ಜಿಲ್ಲೆಗಳಲ್ಲಿ ಪ್ರಾರಂಭಿಸಲಾಗಿದೆ. ಈ ಆಶ್ರಮ ಶಾಲೆಗಳಲ್ಲಿ [illegible] ವಿದ್ಯಾರ್ಥಿಗಳಿಗೆ ಊಟ ಮತ್ತು ವಸತಿ ಸೌಲಭ್ಯವನ್ನು ಕಲ್ಪಿಸಿ, ಹತ್ತಿರದಲ್ಲಿ ಸರ್ಕಾರಿ ಶಾಲೆ [illegible] ಶೈಕ್ಷಣಿಕ ಸೌಲಭ್ಯವನ್ನು ಕೂಡಾ ಒದಗಿಸಲಾಗುವುದು.

[illegible] ಪ್ರತಿಷ್ಠಿತ ಶಾಲೆಗಳಲ್ಲಿ ಪ್ರವೇಶಾವಕಾಶ ಸೌಲಭ್ಯ

ಸರ್ಕಾರದ ಆದೇಶ ಸಂಖ್ಯೆ: ಬಿಸಿಡಬ್ಲ್ಯೂ 82 ಬಿಎಂಎಸ್ 2019, ದಿನಾಂಕ: 24.10.2019ರಲ್ಲಿ 2020-[illegible] ಸಾಲಿನ ಶೈಕ್ಷಣಿಕ ವರ್ಷದಿಂದ ಪ್ರತಿಷ್ಠಿತ ಶಾಲೆಗಳಲ್ಲಿ ಪ್ರವೇಶವನ್ನು ಸ್ಥಗಿತಗೊಳಿಸಲಾಗಿರುತ್ತದೆ. ಆದರೆ ಈಗಾಗಲೇ ಪ್ರತಿಷ್ಠಿತ ಶಾಲೆಗಳಲ್ಲಿ ಪ್ರವೇಶ ಪಡೆದಿರುವ ಅಲೆಮಾರಿ/ಅರೆಅಲೆಮಾರಿ ಜನಾಂಗದ ನವೀಕರಣ ವಿದ್ಯಾರ್ಥಿಗಳಿಗೆ 10ನೇ ತರಗತಿಯ ವಿದ್ಯಾಭ್ಯಾಸ ಪೂರ್ಣಗೊಳ್ಳುವವರೆಗೆ ವಾರ್ಷಿಕ ಅನುದಾನ ನೀಡಲಾಗುವುದು.

ಆಯುಕ್ತರು
ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ
ಬೆಂಗಳೂರು.

ಮಾನ್ಯ ವಿಧಾನಪರಿಷತ್ ಸದಸ್ಯರಾದ ಶ್ರೀ ಪಿ.ಆರ್.ರಮೇಶ್ (ನಾಮನಿರ್ದೇಶನ ಹೊಂದಿದವರು) ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 387 ರ (ಈ) ಗೆ

ಅನುಬಂಧ-45

2021-22ನೇ ಸಾಲಿನಲ್ಲಿ ಆಯೋಜಿಸಲಾಗಿರುವ ಅರಿವು ಮೂಡಿಸುವ ಕಾರ್ಯಕ್ರಮಗಳ ವಿವರ

ಕ್ರ.ಸಂ.	ಜಿಲ್ಲೆಯ ಹೆಸರು	ಕಾರ್ಯಕ್ರಮಗಳ ಸಂಖ್ಯೆ	ಬಿಡುಗಡೆ ಮಾಡಿರುವ ಮೊತ್ತ (ರೂ.ಗಳಲ್ಲಿ)
1	ಬೆಂಗಳೂರು ನಗರ	2	30000.00
2	ಬೆಂಗಳೂರು ಗ್ರಾಮಾಂತರ	6	90000.00
3	ಬೆಳಗಾವಿ	5	75000.00
4	ಬಳ್ಳಾರಿ	7	105000.00
5	ಬೀದರ್	6	90000.00
6	ಬಾಗಲಕೋಟೆ	3	45000.00
7	ಚಿಕ್ಕಮಗಳೂರು	3	45000.00
8	ಚಿತ್ರದುರ್ಗ	44	660000.00
9	ಚಾಮರಾಜನಗರ	2	30000.00
10	ಚಿಕ್ಕಬಳ್ಳಾಪುರ	8	120000.00
11	ಧಾರವಾಡ	5	75000.00
12	ದಕ್ಷಿಣ ಕನ್ನಡ	1	15000.00
13	ದಾವಣಗೆರೆ	8	120000.00
14	ಗದಗ	3	45000.00
15	ಹಾಸನ	6	90000.00
16	ಹಾವೇರಿ	4	60000.00
17	ಕಲಬುರ್ಗಿ	4	60000.00
18	ಕೋಲಾರ	5	75000.00
19	ಕೊಡಗು	1	15000.00
20	ಕೊಪ್ಪಳ	4	60000.00
21	ಮೈಸೂರು	3	45000.00
22	ಮಂಡ್ಯ	2	30000.00
23	ರಾಯಚೂರು	6	90000.00
24	ರಾಮನಗರ	3	45000.00
25	ಶಿವಮೊಗ್ಗ	4	60000.00
26	ತುಮಕೂರು	33	495000.00
27	ಉತ್ತರ ಕನ್ನಡ	2	30000.00
28	ಉಡುಪಿ	2	30000.00
29	ವಿಜಯಪುರ	4	60000.00

ಕ್ರ.ಸಂ.	ಜಿಲ್ಲೆಯ ಹೆಸರು	ಕಾರ್ಯಕ್ರಮಗಳ ಸಂಖ್ಯೆ	ಬಿಡುಗಡೆ ಮಾಡಿರುವ ಮೊತ್ತ (ರೂ.ಗಳಲ್ಲಿ)
30	ಯಾದಗಿರಿ	6	90000.00
31	ವಿಜಯನಗರ	8	120000.00
	ಒಟ್ಟು	**200**	**3000000.00**

13/2/22

ಆಯುಕ್ತರು
ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ,
ಬೆಂಗಳೂರು.